ಇ)

ವರ್ಷ	ಕಳುವಾದ ವಸ್ತುಗಳ ಮೌಲ್ಯ ರೂ.	ವಶಪಡಿಸಿಕೊಂಡ ವಸ್ತುಗಳ ಮೌಲ್ಯ ರೂ.
೧೯೮೫	೧೯,೦೯,೦೯೧–೨೦	೮,೭೬,೭೫೮–೨೦
೧೯೮೬	೨೮,೧೧,೨೫೯–೮೦	೧೩,೦೪,೯೭೧–೦೦
೧೯೮೭	೧೭,೨೬,೧೫೬–೦೦	೩,೪೮,೬೮೯–೦೦

ದಿನಾಂಕ ೧–೧–೮೫ರಿಂದ ೧೯೮೮ರ ಮೇ ೧೫ರವರೆಗೆ ಒಟ್ಟು ೧೫೦೭ ಜನ ಅಪರಾಧಿಗಳನ್ನು ಬಂಧಿಸಲಾಗಿದೆ. ಒಟ್ಟು ೧೫೪ ದರೋಡೆ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿವೆ.

ಒಟ್ಟು ೧೧ ದರೋಡೆ ಪ್ರಕರಣಗಳಲ್ಲಿ ಅಪರಾಧಿಗಳಿಗೆ ನ್ಯಾಯಾಲಯವು ಶಿಕ್ಷೆ ವಿಧಿಸಿದೆ.

ಮುಂಬೈ ಬಸ್ ಸಾರಿಗೆ ಬಗ್ಗೆ

೧೫೩೧. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜವಂಖಿಂಡಿ—ಮುಂಬೈ ನಗರಗಳ ಮಧ್ಯೆ ರಾತ್ರಿ ಸಂಚಾರದ ಬಸ್ ಓಡಿಸುವಂತೆ ಜವಂಖಿಂಡಿಯ ನಾಗರೀಕರಿಂದ ಮನವಿ ಬಂದಿರುವುದು ನಿಜವೇ ;

ಆ) ಸರ್ಕಾರವು ಈ ಕೋರಿಕೆಯನ್ನು ಮನ್ನಿಸಿ ಬಸ್ಸ್ ಓಡಿಸುವ ವ್ಯವಸ್ಥೆ ಮಾಡುವುದೇ ?

ಇ) ಹಾಗಿಲ್ಲದಿದ ಲ್ಲಿ ಸರ್ಕಾರಕ್ಕೆ ಇರುವ ತೊಂದರೆಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಯವರು).—

ಅ) ಹೌದು.

ಆ) ಮತ್ತು ಇ) ಈ ಮಾರ್ಗವು ಈಗಿನ ಉಭಯ ರಾಜ್ಯಗಳ ಒಪ್ಪಂದದಲ್ಲಿ ಸೇರಿರುವುದಿಲ್ಲ. ಆದ್ದರಿಂದ ಈ ಮಾರ್ಗದ ಮೇಲೆ ಬಸ್ಸನ್ನು ಓಡಿಸಲು ಸಾಧ್ಯವಾಗಿರುವುದಿಲ್ಲ. ಈ ಮಾರ್ಗವನ್ನು ಮಹಾರಾಷ್ಟ್ರ ಸರ್ಕಾರದೊಡನೆ ಚರ್ಚಿಸಿ ಮುಂದಿನ ಉಭಯ ರಾಜ್ಯಗಳ ಒಪ್ಪಂದದ ಪಟ್ಟಿಯಲ್ಲಿ ಸೇರಿಸಲು ಉದ್ದೇಶಿಸಲಾಗಿದೆ.

ಸಚಿವರುಗಳ ವಿದೇಶ ಪ್ರವಾಸದ ಬಗ್ಗೆ

೧೫೩೪. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಮುಂಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭–೮೮ರಲ್ಲಿ ರಾಜ್ಯ ಸಚಿವ ಸಂಪುಟದ ಎಷ್ಟು ಜನ ಸಚಿವರು ವಿದೇಶ ಪ್ರವಾಸಕ್ಕೆ ಹೋಗಿದ್ದರು (ಸಚಿವರ ಹೆಸರುಗಳನ್ನು ಒದಗಿಸುವುದು)

ಆ) ಇವರ ವಿದೇಶ ಪ್ರವಾಸಕ್ಕಾಗಿ ರಾಜ್ಯ ಸರ್ಕಾರ ಖರ್ಚು ಮಾಡಿದ ಹಣವೆಷ್ಟು ?

ಇ) ಇವರ ವಿದೇಶ ಪ್ರವಾಸದ ಉದ್ದೇಶವೇನಿತ್ತು ?

ಶ್ರೀ ರಾಮಕೃಷ್ಣ ಹೆಗಡೆ (ಮುಂಖ್ಯ ಮಂತ್ರಿಗಳು).—

ಅ) ೧೧

ಸಚಿವರುಗಳ ಹೆಸರುಗಳು

೧	ಶ್ರೀ ರಾಮಕೃಷ್ಣ ಹೆಗಡೆ, ಮುಂಖ್ಯ ಮಂತ್ರಿಗಳು.
೨	ಶ್ರೀ ಅಬ್ದುಲ್ ನಜೀರ್‌ಸಾಬ್, ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಸಚಿವರು,
೩	ಶ್ರೀ ಎಸ್. ಆರ್. ಬೊಮ್ಮಾಯಿ, ಕಂದಾಯ ಯೋಜನೆ. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು,
೪	ಶ್ರೀ ಜೆ. ಹೆಚ್. ಪಟೇಲ್, ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಸಚಿವರು.
೫	ಶ್ರೀ ಎಂ. ಪಿ. ಪ್ರಕಾಶ್, ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಸಚಿವರು.
೬	ಶ್ರೀ ಜೀವರಾಜ ಆಳ್ವ, ಉನ್ನತ ಶಿಕ್ಷಣ ಸಚಿವರು.
೭	ಶ್ರೀ ಆರ್. ವಿ. ದೇಶಪಾಂಡೆ, ಕೃಷಿ ಸಚಿವರು.
೮	ಶ್ರೀ ಎಸ್. ಕೆ. ಕಾಂತ, ಕಾರ್ಮಿಕ ಸಚಿವರು.
೯	ಶ್ರೀ ಡಿ. ಬಿ. ಇನಾಂದಾರ್, ಅಬ್ಕಾರಿ ರಾಜ್ಯ ಸಚಿವರು.
೧೦	ಶ್ರೀ ಬಿ. ಎಲ್. ಶಂಕರ್, ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು.
೧೧	ಶ್ರೀ ಮಹಮ್ಮದ್ ಮೊಯಿನುದ್ದೀನ್, ವಸತಿ ರಾಜ್ಯ ಸಚಿವರು.

ಆ) ಮುಖ್ಯ ಮಂತ್ರಿಗಳ ಮತ್ತು ಭಾರಿ, ಮತ್ತು ಮಧ್ಯಮ ಕೈಗಾರಿಕೆ ಹಾಗೂ ವಿದ್ಯುತ್ ಸಚಿವರ ಪ್ರವಾಸಕ್ಕಾಗಿ ಆದ ಖರ್ಚು ರೂ. ೨,೧೭,೩೭೦-೦೦

ಇ) ೧) ಮುಖ್ಯಮಂತ್ರಿಗಳು:

ಕೆಲವು ದೇಶಗಳಲ್ಲಿರುವ ಕನ್ನಡ ಸಂಘಗಳ ಬಹಳ ದಿನಗಳ ಆಹ್ವಾನವನ್ನು ಈಡೇರಿಸಿಕೊಳ್ಳುವುದು.

ರಾಜ್ಯದ ವಿವಿಧ ಅಭಿವೃದ್ಧಿ ಘಟಕಗಳಲ್ಲಿ ಬಂಡವಾಳವನ್ನು ತೊಡಗಿಸಲು ಅನಿವಾಸಿ ಭಾರತೀಯರನ್ನು ಭೇಟಿ ಮಾಡುವುದು ಮತ್ತು ಕೆಲವು ಕೈಗಾರಿಕಾ ಘಟಕಗಳಿಗೆ ಭೇಟಿ ನೀಡುವುದು.

ವೈದ್ಯಕೀಯ ಪರೀಕ್ಷೆ.

೨) ಭಾರಿ ಮತ್ತು ಮಧ್ಯಮ ಕೈಗಾರಿಕೆ ಮತ್ತು ವಿದ್ಯುತ್ ಸಚಿವರು:

೧) ಅನಿವಾಸಿ ಭಾರತೀಯರ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಮತ್ತು ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮದವರು ಉತ್ಪೇಜಿಸುತ್ತಿರುವ ಉದ್ಯಮಗಳಿಗೆ ಬೇಕಾಗುವ ತಂತ್ರಜ್ಞಾನವನ್ನು ವಿದೇಶದಿಂದ ಪಡೆಯಲು ಏರ್ಪಾಡು ಮಾಡುವುದು.

೨) ಆಫ್ರಿಕಾ ದೇಶಗಳಲ್ಲಿ–ಖಾಸಗಿ ಪ್ರವಾಸ.

೩) ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಸಚಿವರು.
ಖಾಸಗಿ ಪ್ರವಾಸ: ಪ್ರವಾಸದ ವೆಚ್ಚವನ್ನು ಸಂಬಂಧಪಟ್ಟ ಸಚಿವರುಗಳೇ ಭರಿಸಿರುತ್ತಾರೆ.

೪) ಕಂದಾಯ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಸಚಿವರು.
ಖಾಸಗಿ ಪ್ರವಾಸ: ಪ್ರವಾಸದ ವೆಚ್ಚವನ್ನು ಸಂಬಂಧಪಟ್ಟ ಸಚಿವರುಗಳೇ ಭರಿಸಿರುತ್ತಾರೆ.

೫) ಉನ್ನತ ಶಿಕ್ಷಣ ಸಚಿವರು: ಖಾಸಗಿ ಪ್ರವಾಸ: ಪ್ರವಾಸದ ವೆಚ್ಚವನ್ನು ಸಂಬಂಧಪಟ್ಟ ಸಚಿವರುಗಳೇ ಭರಿಸಿರುತ್ತಾರೆ.

೬ ಕೃಷಿ ಸಚಿವರು. ಖಾಸಗಿ ಪ್ರವಾಸ: ಪ್ರವಾಸದ ವೆಚ್ಚವನ್ನು ಸಂಬಂಧಪಟ್ಟ ಸಚಿವರುಗಳೇ ಭರಿಸಿರುತ್ತಾರೆ.

೭ ಅಬ್ಕಾರಿ ರಾಜ್ಯ ಸಚಿವರು. ಖಾಸಗಿ ಪ್ರವಾಸ: ಪ್ರವಾಸದ ವೆಚ್ಚವನ್ನು ಸಂಬಂಧಪಟ್ಟ ಸಚಿವರುಗಳೇ ಭರಿಸಿರುತ್ತಾರೆ.

೮ ಕಾರ್ಮಿಕ ಸಚಿವರು:
ಇವರ ರಷ್ಯ ಪ್ರವಾಸವನ್ನು ಭಾರತ–ಸೋವಿಯತ್ ಸಾಂಸ್ಕೃತಿಕ ಸಂಘದವರು ನಿಯೋಜಿಸಿದ್ದು ಇದರ ವೆಚ್ಚವನ್ನು ಸಂಘದವರೇ ಭರಿಸಿರುತ್ತಾರೆ.

೯ ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಸಚಿವರು.
ಕಳೆದ ವರ್ಷ ರಷ್ಯದಲ್ಲಿ ನಡೆದ ಭಾರತ ಉತ್ಸವದಲ್ಲಿ ಭಾಗವಹಿಸಲು ಇವರ ಪ್ರವಾಸದ ಖರ್ಚು ವೆಚ್ಚಗಳನ್ನು ಭಾರತ ಸರ್ಕಾರವೇ ಭರಿಸಿತ್ತು.

೧೦ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು:
ಕಳೆದ ವರ್ಷ ರಷ್ಯದಲ್ಲಿ ನಡೆದ ಭಾರತ ಉತ್ಸವದಲ್ಲಿ ಭಾಗವಹಿಸಲು ಇವರ ಪ್ರವಾಸದ ಖರ್ಚು ವೆಚ್ಚಗಳನ್ನು ಭಾರತ ಸರ್ಕಾರವೇ ಭರಿಸಿತ್ತು.

೧೧ ವಸತಿ ರಾಜ್ಯ ಸಚಿವರು.
ಟಿಪ್ಪು ಸುಲ್ತಾನ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಮತ್ತು ಮ್ಯಾಜಿಯಂನ ಅಧ್ಯಕ್ಷರಾಗಿ ಇಂಗ್ಲೆಂಡ್, ನದರ್‌ಲ್ಯಾಂಡ್, ಐರ್‌ಲ್ಯಾಂಡ್, ಪೋರ್ಚುಗಲ್ ಮುಂತಾದ ದೇಶಗಳಲ್ಲಿ ಪ್ರವಾಸ ಮಾಡಿರುತ್ತಾರೆ. ಇದರ ವೆಚ್ಚವನ್ನು ಟಿಪ್ಪು ಸುಲ್ತಾನ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಮತ್ತು ಮ್ಯಾಜಿಯಂ ಭರಿಸಿರುತ್ತೆ.

ಮೈಸೂರಿನ ಅಬ್ಕಾರಿ ಸೂಪರಿಂಟೆಂಡೆಂಟ್‌ರವರ ಮನೆಯ ಮೇಲೆ ದಾಳಿ

೧೭೫೯. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರಿನ ಎಕ್ಸೈಜ್ ಸೂಪರಿಂಟೆಂಡೆಂಟ್‌ರವರ ಮನೆಯನ್ನು ದಿನಾಂಕ ೫–೧೨–೮೯ರಂದು ಲೋಕಾಯುಕ್ತರಮ ದಾಳಿ ಮಾಡಿರುವುದು ನಿಜವೆ,

ಆ) ದಾಳಿಯ ನಂತರ ಈ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆಯೇ,

ಇ) ವರದಿಯನ್ನಾದರಿಸಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ. ಬಿ. ಇನಾಂದಾರ್ (ಅಬಕಾರಿ ಸಚಿವರು).—

ಅ) ಹೌದು.

ಆ) ಒಂದು ತಾತ್ಕಾಲಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ.

ಇ) ಲೋಕಾಯುಕ್ತದ ಅಂತಿಮ ವರದಿಯನ್ನು ಕಾಯ್ದಿರಿಸಿ ಸದರಿ ಅಧಿಕಾರಿಯನ್ನು ವರ್ಗಾವಣೆ ಮಾಡಲಾಗಿದೆ.